ಆ) ಕಾವೇರಿ 3ನೇ ಹಂತದ ಯೋಜನೆಯ ಕೆಲಸವನ್ನು 1992ರ ಜೂನ್ ವೇಳೆಗ ಪೂರ್ಣಗೊಳಿಸಲು ಯೋಜಿಸಲಾಗಿದ್ದು, ಒಳಚರಂಡಿ ವಿಭಾಗದ ಕೆಲಸಗಳನ್ನು 1992-93ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ನ್ಯಾಯಮೂರ್ತಿ ಶ್ರೀ ಎನ್.ಡಿ. ವೆಂಕಟೇಶ್ ನೇತೃತ್ವದ ನ್ಯಾಯಾಂಗ ಆಯೋಗದ ಬಗ್ಗೆ

347 (537) ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಿಸೆಂಬರ್ 1991ರಲ್ಲಿ ನಡೆದ ಕರ್ನಾಟಕ ಬಂದ್ ಸಮಯದಲ್ಲಿ ಬೆಂಗಳೂರಿನಲ್ಲಿ ಆದ ಹಿಂಸಾಚಾರ, ಗಲಭೆ ಮತ್ತು ಗೋಲೀಬಾರ್‌ಗೆ ಸಂಬಂಧಿಸಿದಂತೆ ವಿಚಾರಣೆ ಮಾಡಲು ನ್ಯಾಯಮೂರ್ತಿ ಶ್ರೀ ಎನ್.ಡಿ. ವೆಂಕಟೇಶ್ ನೇತೃತ್ವದಲ್ಲಿ ನ್ಯಾಯಾಂಗ ಆಯೋಗವನ್ನು ಸರ್ಕಾರವು ನೇಮಕ ಮಾಡಿದೆಯೇ?

ಆ) ಹಾಗಿದ್ದಲ್ಲಿ, ಸದರಿ ಆಯೋಗವು ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆಯೇ?

ಇ) ಆಯೋಗವು ಸಾರ್ವಜನಿಕ ಮನವಿಗಳನ್ನು ಕರೆದಿದೆಯೇ?

ಈ) ಆಯೋಗವು ತನ್ನ ವರದಿಯನ್ನು ಯಾವಾಗ ಕೊಡುವ ಸಂಭವವಿದೆ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು):-

ಅ) ಹೌದು

ಆ) ಇನ್ನೂ ಇಲ್ಲ.

ಇ) ಇನ್ನೂ ಇಲ್ಲ.

ಈ) ಈ ಸಂಬಂಧದ ಟರ್ಮ್ಸ್ ಆಫ್ ರೆಫರೆನ್ಸ್ ಪ್ರಕಾರ ಆರು ತಿಂಗಳ ಒಳಗಾಗಿ.

ಅಂತರ ರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ ಸಂಬಂಧಿಸಿದಂತೆ ರಸ್ತೆ ರಿಪೇರಿ ಮತ್ತು ಅಲಂಕಾರಕ್ಕಾಗಿ ನಗರ ಪಾಲಿಕೆಯ ಖರ್ಚು ಮಾಡಿದ ಹಣ.

348 (538) ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂತರ ರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರದ ರಸ್ತೆಗಳ ರಿಪೇರಿ ಮತ್ತು ಅಲಂಕಾರಕ್ಕಾಗಿ ನಗರ ಪಾಲಿಕೆಯು ಖರ್ಚು ಮಾಡಿದ ಹಣವೆಷ್ಟು?

ಆ) ಮೇಲ್ ಕಂಡ ಕೆಲಸಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆಯು ಸರ್ಕಾರದಿಂದ ಪಡೆದ ಹಣವೆಷ್ಟು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಬೆಂಗಳೂರು ಪಾರ್ಷಿಕ ರಿಪೇರಿಯ ಅಂಗವಾಗಿ ರಿಪೇರಿ ಮಾಡಬೇಕಾಗಿದ್ದ ಬೆಂಗಳೂರಿನ ಮುಖ್ಯ ರಸ್ತೆಗಳಿಗೆ ಜಲ್ಲಿ ಮತ್ತು ಟಾರು ಹಾಕಲು ರೂ.2,83,06,029 ಖರ್ಚು ಮಾಡಿದೆ.

ಆ) ಪ್ರಮಾನವೆಲ್ಲಿಗೆ ಇಲ್ಲ.